ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಹೊನ್ನಾವರ.

ಸಿಸಿ ನಂಃ 2510/2022
ಪಿ ಡಬ್ಲುಃ 01
ಸಿ ಡಬ್ಲುಃ 01

| | |
|---|---|
| ಸಾಕ್ಷಿದಾರರ ಹೆಸರು | ಸಾವಿತ್ರಿ ಶೆಟ್ಟಿ |
| ತಂದೆಯ ಹೆಸರು | ಮಹಾಬಲೇಶ್ವರ ಶೆಟ್ಟಿ |
| ವಯಸ್ಸು | 53 |
| ಉದ್ಯೋಗ | ಬೇಕರಿ ಕೆಲಸ |
| ವಾಸ್ತವ್ಯ | ಕವಲಕ್ಕಿ |

ಸಾಕ್ಷಿಯನ್ನು ದಿನಾಂಕಃ 17-10-2023 ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ನಮ್ಮ ಮನೆಯಲ್ಲಿ ನಾನು, ನನ್ನ ತಮ್ಮ ಮತ್ತು ನನ್ನ ತಮ್ಮನ ಹೆಂಡತಿ ವಾಸವಿದ್ದೇವೆ. ನಾನು ಕೆಲಸ ಮಾಡುತ್ತಿರುವ ಬೇಕರಿ ನನ್ನ ತಮ್ಮನಾದ ಗೋಪಾಲಕೃಷ್ಣ ಮಹಾಬಲೇಶ್ವರ ಶೆಟ್ಟಿಗೆ ಸಂಬಂಧಿಸಿದ್ದಾಗಿರುತ್ತದೆ. ನನ್ನ ತಮ್ಮ ಈಗ ಮೃತಪಟ್ಟಿರುತ್ತಾರೆ. ಸದ್ರಿ ಬೇಕರಿಯನ್ನು ಈಗ ನಾನು ನೋಡಿಕೊಳ್ಳುತ್ತಿದ್ದೇನೆ. 1 ನೇ ಆರೋಪಿ ನನ್ನ ತಮ್ಮ. 2 ನೇ ಆರೋಪಿ ನನ್ನ ಅಣ್ಣನ ಮಗ. 3 ನೇ ಆರೋಪಿ ನನ್ನ ಅಕ್ಕನ ಮಗ, 4 ನೇ ಆರೋಪಿ ನನ್ನ ಅಣ್ಣನ ಮಗ. ದಿಃ 13.04.2021 ರಂದು ಸಂಜೆ 7 ರಿಂದ 7.30 ರ ಸಮಯದಲ್ಲಿ ನಾನು ಕವಲಕ್ಕಿಯಲ್ಲಿರುವ ನಮ್ಮ ಬೇಕರಿಯಲ್ಲಿದ್ದಾಗ 4 ಜನ ಆರೋಪಿತರು ಬಂದು ಬೇವರ್ಸಿ ರಂಡೆ ಎಂದು ಬೈದು ನನ್ನ ಕೈಯನ್ನು ಹಿಡಿದು ಎಳೆದು ಹೊರಗಡೆ ತಂದು ನಾನು ಧರಿಸಿದ್ದ ನೈಟಿಯನ್ನು ಹಿಡಿದು ಎಳೆದು ಹರಿದಿದ್ದು ಅದರಿಂದ ನನಗೆ ಅವಮಾನವಾಗಿರುತ್ತದೆ. ಆಗ ನಾನು ಜೋರಾಗಿ ಕೂಗಿಕೊಂಡಿದ್ದು ಆರೋಪಿತರು ನನ್ನನ್ನು ಬಿಟ್ಟು ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲ, ಇನ್ನೊಮ್ಮೆ ಕೊಂದು ಹಾಕುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ. ಆರೋಪಿತರು ತಂದಿದ್ದ ಬಿಳಿ ಬಣ್ಣದ ಕಾರಿನಲ್ಲಿ ನನ್ನನ್ನು ಎಳೆದುಕೊಂಡು ಹೋಗಲು ಪ್ರಯತ್ನಿಸಿರುತ್ತಾರೆ. ಆ ರೀತಿ ಎಳೆದುಕೊಂಡು ಹೋಗುವಾಗ ನಾನು ಜೋರಾಗಿ ಕೂಗಿಕೊಂಡಿದ್ದು ಆಗ ಸ್ಥಳಕ್ಕೆ ಜನರು ಬಂದಿರುತ್ತಾರೆ. ಆಗ ಆರೋಪಿತರು ನನ್ನನ್ನು ಬಿಟ್ಟು ಇನ್ನೊಮ್ಮೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿ ಹೋಗಿರುತ್ತಾರೆ. ನಂತರ ನಾನು ಮತ್ತು ಚಾಸಾ 6 ರವರು ಠಾಣೆಗೆ ಬಂದು ದೂರನ್ನು ಕೊಟ್ಟಿರುತ್ತೇವೆ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಸದ್ರಿ ದಾಖಲೆಯನ್ನು ನಿಪಿ. 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ. 1 ಎ ಎಂದು ಗುರುತಿಸಲಾಯಿತು. ನಂತರ ನಾನು ಹೊನ್ನಾವರದ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ.

ಮಾರನೇ ದಿನ ಪೋಲಿಸರು ನನ್ನ ಬೇಕರಿ ಹತ್ತಿರ ಪಂಚನಾಮೆ ಮಾಡುವ ಸಲುವಾಗಿ ಬಂದಿದ್ದರು. ಆ ಸಮಯದಲ್ಲಿ ಚಾಸಾ 2 ಮತ್ತು 3 ರವರು ಕೂಡಾ ಪಂಚರಾಗಿ ಹಾಜರಿದ್ದರು. ಪೋಲಿಸರಿಗೆ ಘಟನೆ ನಡೆದ ಜಾಗವನ್ನು

ನಾನೇ ತೋರಿಸಿಕೊಟ್ಟಿರುತ್ತೇನೆ. ಆ ಸಮಯದಲ್ಲಿ ನಾನು ಪೋಲಿಸರಿಗೆ ನನ್ನ ಹರಿದು ಹೋದ ನೈಟಿಯನ್ನು ಕೊಟ್ಟಿರುತ್ತೇನೆ. ಪೋಲಿಸರು ಸ್ಥಳದಲ್ಲಿ ಬರವಣಿಗೆ ಮಾಡಿ ಪೋಟೋ ತೆಗೆದಿರುತ್ತಾರೆ. ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಸದ್ರಿ ದಾಖಲೆಯನ್ನು ನಿಪಿ. 2 ಎಂದು , ಸಾಕ್ಷಿಯ ಸಹಿಯನ್ನು ನಿಪಿ. 2 ಎ ಎಂದು ಗುರುತಿಸಲಾಯಿತು. ಪೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಮೂರು ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 3 ರಿಂದ 5 ಎಂದು ಗುರುತಿಸಲಾಯಿತು.

ನಂತರ ನನ್ನನ್ನು ದಿಃ 06.07.2021 ರಂದು ಪೋಲಿಸರು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದು ಆಗ ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಗೆ ಕಲಂ 164 ರಡಿ ನೀಡಿದ ಹೇಳಿಕೆಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಸದ್ರಿ ದಾಖಲೆಯನ್ನು ನಿಪಿ. 6 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ. 6 ಎ ಮತ್ತು ನಿಪಿ. 6 ಬಿ ಎಂದು ಗುರುತಿಸಲಾಯಿತು. ಅದೇ ವರ್ಷ ನನ್ನನ್ನು ಪೋಲಿಸರು ಮತ್ತೊಮ್ಮೆ ಠಾಣೆಗೆ ಕರೆದಿದ್ದು ಬಿಳಿ ಬಣ್ಣದ ಕಾರನ್ನು ಠಾಣೆಯ ಮುಂದೆ ಹಾಜರುಪಡಿಸಿದ್ದು ಅದನ್ನು ನೋಡಿ ನಾನು ಗುರುತಿಸಿರುತ್ತೇನೆ. ಆ ಸಮಯದಲ್ಲಿ ಚಾಸಾ 4 ಮತ್ತು 5 ರವರು ಕೂಡಾ ಸ್ಥಳದಲ್ಲಿ ಹಾಜರಿದ್ದರು. ಆ ಸಮಯದಲ್ಲಿ ಪೋಲಿಸರು ಬರವಣಿಗೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 7 ಎಂದು, ಸಾಕ್ಷಿಯ ಸಹಿಯನ್ನು ನಿಪಿ 7 ಎ ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೋಲಿಸರು ಪೋಟೋ ಕೂಡಾ ತೆಗೆದಿರುತ್ತಾರೆ. ಸಾಕ್ಷಿ ಪೋಟೋ ನೋಡಿ ಗುರುತಿಸಿದ್ದು ಅದನ್ನು ನಿಪಿ 8 ಎಂದು, ಸಿಡಿಯನ್ನು ನಿಪಿ. 9 ಎಂದು ಗುರುತಿಸಲಾಯಿತು. ಪೋಲಿಸರು ವಶಕ್ಕೆ ಪಡೆದ ನನ್ನ ನೈಟಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ನೈಟಿಯನ್ನು ನೋಡಿ ಗುರುತಿಸಿದ್ದು ಅದನ್ನು ಎ ಒ 1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲುಃ ಎ ಪಿ ಪಿ ಯವರಿಂದಃ**

ನಾನು ನ್ಯಾಯಾಧೀಶರ ಮುಂದೆ ಕಲಂ 164 ರಡಿ ಹೇಳಿಕೆಯನ್ನು ದಿಃ 22.04.2021 ರಂದು ನೀಡಿದ್ದೇನೆ ಎಂದರೆ ಇರಬಹುದು. ಕಾರು ಜಪ್ತು ಪಂಚನಾಮೆಯನ್ನು ದಿಃ 06.07.2021 ರಂದು ಜರುಗಿಸಿರುತ್ತಾರೆ ಎಂದರೆ ಸರಿ .

**ಪಾಟೀ ಸವಾಲುಃ ಶ್ರೀ ವಿ. ಆರ್. ಎನ್. ವಕೀಲರಿಂದಃ**

1 ನೇ ಆರೋಪಿ ನನ್ನ ಖಾಸಾ ತಮ್ಮ. 2 ನೇ ಆರೋಪಿ ನನ್ನ ಅಣ್ಣನ ಮಗ, 3 ನೇ ಆರೋಪಿ ಅಕ್ಕನ ಮಗ, 4 ನೇ ಆರೋಪಿ ಅಣ್ಣನ ಮಗ. ಈಗ ನಾನು ನಡೆಸುತ್ತಿರುವ ಬೇಕರಿ ಇರುವ ಜಾಗ ಮೊದಲು ನನ್ನ ತಂದೆಗೆ ಸೇರಿತ್ತು. ಈಗ್ಗೆ ನನ್ನ ತಂದೆ ಮೃತಪಟ್ಟು ಸುಮಾರು 10 ವರ್ಷ ಆಗಿರಬಹುದು. ಸದ್ರಿ ಜಾಗದಲ್ಲಿ ಮೂರು ಅಂಗಡಿಗಳು ಇದ್ದು ಅವು ನನ್ನ ತಂದೆಯ ಕಾಲದಲ್ಲಿ ಮಾಡಲಾಗಿತ್ತು. ಈಗ ಒಂದು ಅಂಗಡಿ 1 ನೇ ಆರೋಪಿಯ ಹೆಸರನಲ್ಲಿ, ಇನ್ನೊಂದು ಅಂಗಡಿ 2 ನೇ ಆರೋಪಿಯ ಹೆಸರಿನಲ್ಲಿ ಮತ್ತು ಇನ್ನೊಂದು ಗೋಪಾಲಕೃಷ್ಣರವರ ಹೆಸರಿನಲ್ಲಿದೆ. ಮೂರು ಅಂಗಡಿಗಳಲ್ಲಿ ಒಂದು ಅಂಗಡಿಯನ್ನು ನಾವು ನಡೆಸುತ್ತಿದ್ದೇವೆ. ಒಂದು ಅಂಗಡಿ ಬಂದ್ ಇದೆ, ಇನ್ನೊಂದು ಅಂಗಡಿ ಬಾಡಿಗೆಗೆ ಕೊಟ್ಟಿರುತ್ತೇವೆ. ನಾನು ಗೋಪಾಲಕೃಷ್ಣನ ಅಂಗಡಿಯಲ್ಲಿ ಬೇಕರಿ ನಡೆಸುತ್ತಿದ್ದೇನೆ. ಇನ್ನೂ ಎರಡು ಅಂಗಡಿಗಳನ್ನು ಗೋಪಾಲಕೃಷ್ಣನೇ ಬಾಡಿಗೆಗೆ ಕೊಟ್ಟಿದ್ದ. ಆ ರೀತಿ ಅಂಗಡಿಗಳನ್ನು ನಾನು ಬಾಡಿಗೆಗೆ ಕೊಟ್ಟಿರುವುದಿಲ್ಲ, ನನ್ನ ತಮ್ಮ ಕೊಟ್ಟಿರುತ್ತಾನೆ. ನನಗೆ 1 ನೇ ಆರೋಪಿ ನನ್ನ ವಿರುದ್ಧ ದೂರು ಕೊಟ್ಟ ವಿಚಾರ ಗೊತ್ತಿಲ್ಲ. ನನ್ನ ವಿರುದ್ಧ

ಇದುವರೆಗೂ ಯಾವದೇ ದೂರನ್ನು ಕೊಟ್ಟಿರುವುದಿಲ್ಲ. ನನ್ನ ಹೇಳಿಕೆಯಲ್ಲಿ ನಾಗರಾಜ ಎನ್ನುವವನು ನನ್ನ ವಿರುದ್ಧ ದೂರು ನೀಡಿದ್ದಾರೆ ಎಂದು ಪೋಲಿಸರು ನನಗೆ ತಿಳಿಸಿದ್ದಾರೆ ಎಂದು ಹೇಳಿರುತ್ತೇನೆ. ನಾಗರಾಜ ಎಂದರೆ ನನ್ನ ಅಕ್ಕನ ಮಗ. ನನ್ನ ವಿರುದ್ಧ ದೂರು ಕೊಟ್ಟಿದ್ದು ಗೊತ್ತಿದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ನನಗೆ ನೆನಪಿರಲಿಲ್ಲ ಎಂದು ನುಡಿಯುತ್ತಾರೆ. ನನಗೆ ಮತ್ತು ಮೃತ ಗೋಪಾಲಕೃಷ್ಣಗೆ 1 ನೇ ಆರೋಪಿ ಅಂಗಡಿಯ ಸಲುವಾಗಿ ನೋಟಿಸ್ ಕೊಟ್ಟಿದ್ದನಾ ಇಲ್ಲವಾ ನನಗೆ ನೆನಪಿಲ್ಲ. ನನ್ನ ತಂದೆಯ ಆಸ್ತಿಯಲ್ಲಿ ಪಾಲು ಕೇಳಿ ನಾನು ದಾವೆ ಹೂಡಿರುತ್ತೇನೆ.

ನಾನು ಸದ್ರಿ ದಿನ ಬೇಕರಿಯಲ್ಲಿ ಒಬ್ಬಳೇ ಇದ್ದೆ. ಚಾಸಾ 2 ರವರು ನಮ್ಮ ಪಕ್ಕದ ಅಂಗಡಿ ನಡೆಸುತ್ತಿದ್ದಾರೆ. ಘಟನೆ ನಡೆದಾಗ ಸಂಜೆ 7.30 ಆಗಿತ್ತು. ಆ ಸಮಯದಲ್ಲಿ ಕವಲಕ್ಕಿ ಹತ್ತಿರ ತುಂಬಾ ಜನಸಂದಣಿ ಇರುತ್ತದೆ ಎಂದರೆ ಸರಿ. ಸದ್ರಿ ಸ್ಥಳದಿಂದ ನಮ್ಮ ಮನೆ ಸುಮಾರು ಅರ್ಧ ಕಿ ಮೀ ದೂರ ಇದೆ. ಮೊದಲು 1 ನೇ ಆರೋಪಿ ನಮ್ಮ ಅಂಗಡಿ ಒಳಗಡೆ ಬಂದಿರುತ್ತಾನೆ. ಆ ರೀತಿ ಬಂದವನೇ ಅವಾಚ್ಯ ಶಬ್ದಗಳಿಂದ ಬೈದು ನನ್ನ ಕೈ ಹಿಡಿದು ಎಳೆದು ಹೊರಗಡೆ ಬಂದಿರುತ್ತಾನೆ. ಈ ಎಲ್ಲಾ ಘಟನೆ ಸುಮಾರು 10 ನಿಮಿಷಗಳ ಒಳಗೆ ನಡೆದಿರುತ್ತದೆ. ಆಗ ಸ್ಥಳದಲ್ಲಿದ್ದವರು ಗಲಾಟೆ ನೋಡುತ್ತಿದ್ದರೂ ಅದನ್ನು ತಪ್ಪಿಸಿರುವುದಿಲ್ಲ. ನಾನು ನ್ಯಾಯಾಧೀಶರ ಮುಂದೆ ಏನು ಹೇಳಿಕೆ ಕೊಟ್ಟಿರುತ್ತೇನೆ ಎಂದು ಈಗ ನನಗೆ ನೆನಪಿಲ್ಲ.

ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ಕೊಡುವಾಗ ಆರೋಪಿತರು ಬಂದವರೇ ನಮ್ಮ ಬೇಕರಿಯ ಪಕ್ಕದಲ್ಲಿದ್ದ 2 ಅಂಗಡಿಗಳ ಬೀಗವನ್ನು ಒಡೆಯಲು ಶುರುಮಾಡಿದರು ಎಂದು ಹೇಳಿಕೆ ನೀಡಿರುತ್ತೀರಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸದ್ರಿ ದಿನ ಆರೋಪಿತರು ಬಂದವರೇ ನಮ್ಮ ಅಂಗಡಿಯ ಪಕ್ಕದಲ್ಲಿರುವ ಅಂಗಡಿಯ ಬೀಗಗಳನ್ನು ಒಡೆಯುತ್ತಿದ್ದರು. ಆ ರೀತಿ ಬೀಗ 1 ನೇ ಆರೋಪಿ ಒಡೆಯುತ್ತಿದ್ದ. ಉಳಿದವರು ನಿಂತುಕೊಂಡಿದ್ದರು. ಚಾಸಾ 2 ರವರ ಅಂಗಡಿ ಘಟನೆ ನಡೆಯುವ ಸಮಯದಲ್ಲಿ ತೆರೆದಿತ್ತು. ಸಾಕ್ಷಿ ಮುಂದುವರಿದು ಸ್ಥಳದಲ್ಲಿ ಒಟ್ಟೂ ನಾಲ್ಕು ಅಂಗಡಿಗಳು ಇದ್ದು ನಮ್ಮ ಬೇಕರಿಯ ಬಲಬದಿಗೆ ಚಾಸಾ 2 ರವರ ಅಂಗಡಿ ಇದೆ ಎಂದು ನುಡಿಯುತ್ತಾರೆ. ಎಡಬದಿಗೆ ನಮ್ಮ ಅಂಗಡಿಗೆ ತಾಗಿಕೊಂಡ ಅಂಗಡಿಗೆ ಬೀಗಹಾಕಲಾಗಿತ್ತು, ಅದರ ಎಡಗಡೆ ಇದ್ದ ಅಂಗಡಿ ತೆರೆದಿತ್ತು. ಚಾಸಾ 2 ರವರ ಅಂಗಡಿ ಹಾರ್ಡವೇರ್ ಶಾಪ್ ಆಗಿರುತ್ತದೆ. ನಮ್ಮ ಬೇಕರಿಯ ಎಡಬದಿಯ ಕೊನೆಯ ಅಂಗಡಿ ಮೀನಿನ ಊಟದ ಅಂಗಡಿಯಾಗಿರುತ್ತದೆ. ಸದ್ರಿ ನಾಲ್ಕೂ ಅಂಗಡಿಗಳು ಒಂದೇ ಕಾಂಪ್ಲೆಕ್ಸನಲ್ಲಿ ಇರುತ್ತವೆ. ಪಂಚನಾಮೆ ಮಾಡುವ ಸಮಯದಲ್ಲಿ ನಮ್ಮ ಅಂಗಡಿಯ ಎಡಭಾಗದಲ್ಲಿ ಇರುವ ಅಂಗಡಿ ತೆರೆದ ಸ್ಥಿತಿಯಲ್ಲಿ ಇರಲಿಲ್ಲ. ನಿಪಿ. 4 ರಲ್ಲಿ ಕಂಡುಬರುವ ಬೇಕರಿಯ ಪಕ್ಕದ ಅಂಗಡಿ ತೆರೆದ ಸ್ಥಿತಿಯಲ್ಲಿ ಇದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಮೊದಲೇ ಅಂಗಡಿಯನ್ನು ನನ್ನ ತಮ್ಮ ಜೀವಂತ ಇದ್ದಾಗ ದಾಮೋದರ ಎನ್ನುವವರಿಗೆ ಅದನ್ನು ಬಾಡಿಗೆಗೆ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಈ ಮೊದಲು ಸದ್ರಿ ಅಂಗಡಿ ಬಂದ್ ಇದೆ ಎದು ಏಕೆ ಸುಳ್ಳು ಹೇಳಿದಿರಿ ಎಂದರೆ ಸಾಕ್ಷಿ ನನಗೆ ನೆನಪಿರಲಿಲ್ಲ ಎಂದು ನುಡಿಯುತ್ತಾರೆ. ನನಗೆ ಯಾವದೇ ಮರೆವಿನ ರೋಗ ಇರುವುದಿಲ್ಲ.

ಆರೋಪಿತರು ಬೀಗವನ್ನು ಒಡೆಯುವಾಗ ಅಕ್ಕಪಕ್ಕದ ಅಂಗಡಿಯವರು ಏಕೆ ಬೀಗ ಒಡೆಯುತ್ತೀರಿ ಎಂದು ಕೇಳಿರುವುದಿಲ್ಲ. ನಾನು ಮಾತ್ರ ಅಂಗಡಿಯ ಒಳಗಡೆ ಇದ್ದು ಒಡೆಯಬೇಡಿ ಎಂದು ಹೇಳಿರುತ್ತೇನೆ. ನಮ್ಮ ಅಂಗಡಿಯಿಂದ ಒಳಗಡೆ ನಿಂತುನೋಡಿದರೆ ಬೀಗ ಒಡೆಯುತ್ತಿದ್ದ ಜಾಗ ಕಂಡುಬರುತ್ತದೆ. ನಮ್ಮ ಅಂಗಡಿಯಲ್ಲಿ ಸಿಸಿ ಕ್ಯಾಮರಾ ಇದೆ. ಪೋಲಿಸರಿಗೆ ಸಿಸಿ ಕ್ಯಾಮರಾ ಫೂಟೇಜನ್ನು ಕೊಟ್ಟಿರುತ್ತೇನೆ. ದೂರಿನಲ್ಲಿ ಘಟನೆಯನ್ನು ಚಾಸಾ 2 ರವರು ನೋಡಿರುತ್ತಾರೆ ಎಂದು ಬರೆಸಿದ್ದೆನಾ ಇಲ್ಲವಾ ನೆನಪಿಲ್ಲ. ಈಗ ನನ್ನ ಕನ್ನಡಕ ಇಲ್ಲದ ಕಾರಣ ಓದಲು ಆಗುವುದಿಲ್ಲ. ಚಾಸಾ 2 ರವರು ಘಟನೆ ನೋಡಿರುತ್ತಾರೆ ಎಂದು ಪೋಲಿಸರಿಗೆ ಹೇಳಿರುತ್ತೇನೆ. ಈ ವಿಚಾರವನ್ನು ಪಂಚನಾಮೆಗೆ ಬಂದಾಗ ಹೇಳಿರುತ್ತೇನೆ. ಆಗ ಪೋಲಿಸರು ಚಾಸಾ 2 ರವರನ್ನು ವಿಚಾರಣೆ ಮಾಡಿರುತ್ತಾರೆ. ಆಗ ಚಾಸಾ 2 ರವರ ಹೇಳಿಕೆ ಪಡೆದಿರುತ್ತಾರಾ ಇಲ್ಲವಾ ನನಗೆ ಗೊತ್ತಿಲ್ಲ. ಅಂಗಡಿಯ ಒಳಗಡೆ 1 ನೇ ಆರೋಪಿ ಮಾತ್ರ

ಬಂದಿರುತ್ತಾನೆ. ಸಿಸಿ ಕ್ಯಾಮರಾದಲ್ಲಿ ಕಾರ್ ಬಂದಿದ್ದು ಮತ್ತು ಎಲ್ಲಾ ಘಟನೆ ರೆಕಾರ್ಡ ಆಗಿದೆಯಾ ಎಂದರೆ ಸಾಕ್ಷಿ ಕ್ಯಾಮರಾ ಕಪ್ಪಾದ್ದ ಕಾರಣ ನಿರ್ದಿಷ್ಟವಾಗಿ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಅಂಗಡಿಯಿಂದ ಸುಮಾರು 30 ಅಡಿ ದೂರದಲ್ಲಿ ಕಾರ್ ನಿಲ್ಲಿಸಿರುತ್ತಾರೆ.

ನಮ್ಮ ಅಂಗಡಿಯಿಂದ ರಾ.ಹೆದ್ದಾರಿ ಅಂದಾಜು 75 ಅಡಿ ದೂರದಲ್ಲಿದೆ. ನನ್ನನ್ನು ಅಂಗಡಿಯ ಹೊರಗೆ ಎಳೆದುಕೊಂಡು ಬಂದ ಮೇಲೆ 1ನೇ ಆರೋಪಿ ನನ್ನ ನೈಟಿ ಹಿಡಿದು ಎಳೆದಿರುತ್ತಾನೆ. ಉಳಿದ ಆರೋಪಿತರು ನೋಡುತ್ತಾ ನಿಂತಿರುತ್ತಾರೆ. 30 ಅಡಿ ದೂರದಲ್ಲಿ ನಿಂತಿದ್ದ ಕಾರಿನ ಹತ್ತಿರ ನನ್ನನ್ನು ಎಳೆದುಕೊಂಡು ಹೋಗಿರುತ್ತಾರೆ. ಆಗ ಸುಮಾರು 200 ಜನ ಸೇರಿರುತ್ತಾರೆ. ಗಲಾಟೆಯನ್ನು ಬೇರೆ ಯಾರು ತಪ್ಪಿಸಿರುವುದಿಲ್ಲ. ನಾಲ್ಕೂ ಜನ ಆರೋಪಿತರು ಸೇರಿ ನನ್ನನ್ನು ಕಾರಿನಲ್ಲಿ ದೂಡಿ ಸೇರಿಸಿರುತ್ತಾರೆ. ಅದು ಬಿಳಿ ಬಣ್ಣದ ಕಾರಾಗಿದ್ದು ಅದರ ನಂಬರ್ ನನಗೆ ಗೊತ್ತಿಲ್ಲ. ಸದ್ರಿ ಕಾರಿನ ನಂಬರ್ ಬಗ್ಗೆ ನಾನು ಚಾಸಾ 2 ರವರನ್ನು ವಿಚಾರಿಸಿರುವುದಿಲ್ಲ. ಸದ್ರಿ ಘಟನೆಯಿಂದಾಗಿ ನನಗೆ ಎಡಗೈಗೆ ಒಳನೋವಾಗಿರುತ್ತದೆ. ನಾನು ಅಂದಾಜು 9.30 ರ ಸಮಯಕ್ಕೆ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನನ್ನನ್ನು ಚಾಸಾ 6 ರವರು ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ಎಡಗೈಗೆ ತರಚಿದ ರಕ್ತಗಾಯವಾಗಿತ್ತು. ಅದನ್ನು ನಾನು ವೈದ್ಯರಿಗೆ ತೋರಿಸಿರುತ್ತೇನೆ. ನಾನು ಘಟನಾ ಸಮಯದಲ್ಲಿ ಧರಿಸಿದ್ದ ನೈಟಿಯನ್ನೇ ಹಾಕಿ ಆಸ್ಪತ್ರೆಗೆ ಹೋಗಿದ್ದೆ. ಮಾರನೇ ದಿನ ಪೋಲಿಸರು ಘಟನಾ ಸ್ಥಳಕ್ಕೆ ಬಂದು ಇಬ್ಬರು ಪಂಚರನ್ನು ಕರೆಸಲು ನನಗೆ ಹೇಳಿದ್ದರಿಂದ ನಾನು ಚಾಸ 2 ಮತ್ತು 3 ರವರನ್ನು ಕರೆಸಿರುತ್ತೇನೆ. ಪಂಚನಾಮೆಯನ್ನು ಇದೇ ರೀತಿ ಬರೆಯಬೇಕು ಎಂದು ನಾನು ಪೋಲಿಸರಿಗೆ ಹೇಳಿರುವುದಿಲ್ಲ. ಘಟನಾ ಸ್ಥಳಕ್ಕೆ ಬಂದಾಗ ಪೋಲಿಸರು ನೈಟಿ ಬೇಕು ಎಂದು ಹೇಳಿದ್ದು ನಾನು ಮನೆಯಿಂದ ಅದನ್ನು ತಂದು ಕೊಟ್ಟಿರುತ್ತೇನೆ. ಪಂಚನಾಮೆ ಮಾಡುವದಕ್ಕಿಂತ ಪೂರ್ವದಲ್ಲಿ ಅದನ್ನು ನನ್ನ ಮನೆಯಿಂದ ತಂದು ಇಟ್ಟುಕೊಂಡಿದ್ದೆ. ಪೋಲಿಸರು ನೈಟಿಯ ಪೋಟೋವನ್ನು ತೆಗೆದಿರುತ್ತಾರೆ. ಸ್ಥದಲ್ಲಿ ಬರೆದುಕೊಂಡಿದ್ದು ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಂತರ ಪೋಲಿಸ್ ಠಾಣೆಯಲ್ಲಿ ಒಂದು ಪಂಚನಾಮೆ ಮಾಡಿರುತ್ತಾರೆ. ಪೋಲಿಸರು ಸದ್ರಿ ಕಾರನ್ನು ಠಾಣೆಯ ಮುಂದೆ ಹೇಗೆ ತಂದಿದ್ದರು ಎಂದು ನನಗೆ ಗೊತ್ತಿಲ್ಲ. ಗಾಡಿ ನಂಬರನ್ನು ನಾನು ಪೋಲಿಸರಿಗೆ ಹೇಳಿರುತ್ತೇನೆ. ದೂರು ಕೊಡುವಾಗಲೇ ನಾನು ಗಾಡಿ ನಂಬರ್ ಬರೆಸಿರುತ್ತೆನೆ. ಸದ್ರಿ ಕಾರಿನ ಸಂಖ್ಯೆಯನ್ನು ನನಗೆ ಚಾಸಾ 6 ರವರು ಹೇಳಿರುತ್ತಾರೆ. ಪೋಲಿಸ್ ಠಾಣೆಯಲ್ಲಿ ಜರುಗಿಸಿದ ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದ್ರಿ ದಿನ ಆರೋಪಿತರು ನಮ್ಮ ಅಂಗಡಿಯ ಹತ್ತಿರ ಬಂದಿದ್ದು ಇಲ್ಲ, ಹಲ್ಲೆ ಮಾಡಿದ್ದು ಇಲ್ಲ ಮತ್ತು ಬೈದಿದ್ದು ಇಲ್ಲ ಎಂದರೆ ಸರಿಯಲ್ಲ.

1 ನೇ ಆರೋಪಿ ಕುಂದಾಪುರದಲ್ಲಿ ಕೆಲಸ ಮಾಡುತ್ತಿದ್ದು ತ್ರಾಸಿಯಲ್ಲಿ ಖಾಯಂ ವಾಸ್ತವ್ಯ ಮಾಡುತ್ತಿದ್ದಾನೆ. ನಾನು ಮತ್ತು ನನ್ನ ಮೃತ ತಮ್ಮ ಸೇರಿ ಆರೋಪಿತರಿಗೆ ಸೇರಿದ ಅಂಗಡಿಯನ್ನು ಒಳಹಾಕಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆದ್ದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.

ಸಿಸಿ ನಂಃ 2510/2022
ಪಿ ಡಬ್ಲುಃ02
ಸಿ ಡಬ್ಲುಃ02

| | |
|---|---|
| ಸಾಕ್ಷಿದಾರರ ಹೆಸರು | ರಾಮಚಂದ್ರ ಆಚಾರಿ |
| ತಂದೆಯ ಹೆಸರು | ವೆಂಕಟ್ರಮಣ ಆಚಾರಿ |
| ವಯಸ್ಸು | 54 |
| ಉದ್ಯೋಗ | ವ್ಯಾಪಾರ |
| ವಾಸ್ತವ್ಯ | ಹಡಿನಬಾಳ |

ಸಾಕ್ಷಿಯನ್ನು ದಿನಾಂಕಃ 17-10-2023 ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ಸಾಕ್ಷಿಗೆ ನಿಪಿ. 2ರ ಪಂಚನಾಮೆಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ. 2 ಬಿ ಎಂದು ಗುರುತಿಸಲಾಯಿತು. ಸದ್ರಿ ದಾಖಲೆಗೆ ನಾನು ದಿಃ 14.04.2023 ರಂದು ಕವಲಕ್ಕಿಯ ಚಾಸಾ 1 ರವರಿಗೆ ಸೇರಿದ ಅಂಗಡಿಯ ಹತ್ತಿರ ಸಹಿ ಮಾಡಿರುತ್ತೇನೆ. ನನ್ನ ಜೊತೆ ಸಹಿ ಮಾಡುವಾಗ ರಾಘು ಎನ್ನುವವರು ಕೂಡಾ ಹಾಜರಿದ್ದರು. ಪೋಲಿಸರು ಸ್ಥಳಕ್ಕೆ ಬಂದಾಗ ಘಟನಾ ಸ್ಥಳವನ್ನು ಚಾಸಾ 1 ರವರು ತೋರಿಸಿರುತ್ತಾರೆ. ಆ ಸಮಯದಲ್ಲಿ ಪೋಲಿಸರಿಗೆ ನೈಟಿಯನ್ನು ಕೊಡಲಾಗಿತ್ತು. ಪೋಲಿಸರು ಸ್ಥಳದಲ್ಲಿ ಬರವಣಿಗೆಯನ್ನು ಮದ್ಯಾಹ್ನ 12 ರಿಂದ 1 ರವರೆಗೆ ಮಾಡಿ ಫೋಟೋಗಳನ್ನು ಸಹಾ ತೆಗೆದಿರುತ್ತಾರೆ. ಸಾಕ್ಷಿ ನಿಪಿ 3 ರಿಂದ 5 ರ ಫೋಟೋ ನೋಡಿ ಗುರುತಿಸುತ್ತಾರೆ. ಸದ್ರಿ ದಿನ ಪೋಲಿಸರು ವಶಕ್ಕೆ ಪಡೆದ ನೈಟಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಮುಂದುವರಿದು ಅದನ್ನು ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲುಃ ಎ ಪಿ ಪಿ ಯವರಿಂದಃ**

ಸದ್ರಿ ದಾಖಲೆಗೆ ಸಹಿಯನ್ನು ದಿಃ 14.04.2021 ರಂದು ಮಾಡಿರುತ್ತೇನೆ ಎಂದರೆ ಸರಿ. ಸದ್ರಿ ದಿನ ಎಂ ಒ 1 ನ್ನು ಪೋಲಿಸರು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿ .

**ಪಾಟೀ ಸವಾಲುಃ ಶ್ರೀ ವಿ. ಆರ್. ಎನ್. ವಕೀಲರಿಂದಃ**

ನಾನು ಕವಲಕ್ಕಿಯಲ್ಲಿ ಬಾಡಿಗೆ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದೇನೆ. ನಾನು ಚಾಸಾ 1 ರವರ ಅಕ್ಕನ ಅಂಗಡಿಯಲ್ಲಿ ಬಾಡಿಗೆಗೆ ಇದ್ದೇನೆ. ನಾನು ಚಾಸಾ 1 ರವರ ಅಂಗಡಿಯ ಬಲಬದಿಗೆ ಬಾಡಿಗೆಗೆ ಇದ್ದೇನೆ. ಚಾಸಾ 1 ರವರ ಅಂಗಡಿಯ ಎಡಬದಿಗೆ ಟಾಯರ್ ಅಂಗಡಿ ಇದ್ದು, ಅದರ ಎಡಬದಿಗೆ ಹೋಟೆಲ್ ಇದೆ. ಗಲಾಟೆಯನ್ನು ನಾನು ನೋಡಿರುತ್ತೇನೆ. ಈ ವಿಚಾರವನ್ನು ನಾನು ಪೋಲಿಸರಿಗೆ ಹೇಳಿರುತ್ತೇನೆ. ನಾನು ಗೌಜಿ ಕೇಳಿ ನನ್ನ ಅಂಗಡಿಯಿಂದ ಹೊರಗಡೆ ಬಂದು ನೋಡಿರುತ್ತೇನೆ. ನಿರ್ದಿಷ್ಟವಾಗಿ ಏನು ಘಟನೆ ನಡೆಯಿತು ಎಂದು ನಾನು ನೋಡಿರುವುದಿಲ್ಲ. ನನ್ನ ಮಾಲಿಕರ ಮಾಲಿಕತ್ವದ ಕುರಿತು ಯಾವದೇ ದಾಖಲೆಯನ್ನು ನೋಡಿರುವುದಿಲ್ಲ. ನನಗೆ ಚಾಸಾ 1 ರವರ ಅಕ್ಕ ಸದ್ರಿ ಅಂಗಡಿ ಆಕೆಗೆ ಸೇರಿರುತ್ತದೆ ಎಂದು ಹೇಳಿರುತ್ತಾಳೆ. ನಾನು ಬಾಡಿಗೆಗೆ ಇದ್ದ ಅಂಗಡಿ 1 ನೇ ಆರೋಪಿಗೆ ಸೇರಿದ್ದರೂ ಕೂಡಾ ಚಾಸಾ 1 ರವರ ಅಕ್ಕನಿಗೆ ಸೇರಿದ್ದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ಅಂಗಡಿ ಯಾರ ಹೆಸರಿನಲ್ಲಿದೆ ಎಂದು ದಾಖಲೆಯನ್ನು ನಾನು ನೋಡಿರುವುದಿಲ್ಲ. ಅಂಗಡಿಯ ಮಾಲಿಕತ್ವದ ಬಗ್ಗೆ ಚಾಸಾ 1 ರವರು ನೀಡಿದ ಮಹಿತಿಯ ಮೇರೆಗೆ ಆ ರೀತಿ ಹೇಳುತ್ತಿದ್ದೇನೆ. ಪಂಚನಾಮೆಯನ್ನು ಬರೆಯಲು ನಾನು ಮಾಹಿತಿ ಕೊಟ್ಟಿರುವುದಿಲ್ಲ. ಅದರಲ್ಲಿ ಏನು ಬರೆದಿದ್ದಾರೆ ಎಂದು ನಾನು ಓದಿ ಹೇಳಿರುವುದಿಲ್ಲ. ಪಂಚನಾಮೆ ಮಾಡುವ ಸಮಯದಲ್ಲಿ ಪೋಲಿಸರು ನನಗೆ ನೈಟಿಯನ್ನು ತೋರಿಸಿರುವುದಿಲ್ಲ. ಪೋಲಿಸರು ಒಂದು ನೈಟಿಯನ್ನು ವಶಕ್ಕೆ ಪಡೆದಿರುವುದಾಗಿ ನನಗೆ ಹೇಳಿರುತ್ತಾರೆ. ನನಗೆ ವಿಷಯ ಗೊತ್ತಿಲ್ಲದೇ ಇದ್ದರೂ ಚಾಸಾ 1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

ಪ್ರ ದ ನ್ಯಾದಂ ಹೊನ್ನಾವರ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.

ಸಿಸಿ ನಂಃ 2510/2022
ಪಿ ಡಬ್ಲುಃ03
ಸಿ ಡಬ್ಲುಃ03

| | |
|---|---|
| ಸಾಕ್ಷಿದಾರರ ಹೆಸರು | ರಘು ಗೌಡ |
| ತಂದೆಯ ಹೆಸರು | ಸುಬ್ರಾಯ ಗೌಡ |
| ವಯಸ್ಸು | 31 |
| ಉದ್ಯೋಗ | ಚಾಲಕ |
| ವಾಸ್ತವ್ಯ | ಹೊನ್ನಾವರ |

ಸಾಕ್ಷಿಯನ್ನು ದಿನಾಂಕಃ 17-10-2023 ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ಸಾಕ್ಷಿಗೆ ನಿಪಿ. 2ರ ಪಂಚನಾಮೆಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ. 2 ಸಿ ಎಂದು ಗುರುತಿಸಲಾಯಿತು. ಸದ್ರಿ ದಾಖಲೆಗೆ ನಾನು ದಿಃ 14.04.2021 ರಂದು ಕವಲಕ್ಕಿಯಲ್ಲಿರುವ ಚಾಸಾ 1 ರವರಿಗೆ ಸೇರಿದ ಅಂಗಡಿಯ ಹತ್ತಿರ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ಚಾಸಾ 2 ರವರು ಕೂಡಾ ಹಾಜರಿದ್ದರು. ಗಲಾಟೆಯ ಜಾಗವನ್ನು ಚಾಸಾ 1 ರವರು ತೋರಿಸಿಕೊಟ್ಟಿರುತ್ತಾರೆ. ಆ ಸಮಯದಲ್ಲಿ ಪೋಲಿಸರು ನೈಟಿಯನ್ನು ವಶಕ್ಕೆ ಪಡೆದಿರುತ್ತಾರೆ. ಪೋಲಿಸರು ಸ್ಥಳದಲ್ಲಿ ಬರವಣಿಗೆಯನ್ನು ಮಾಡಿ ಪೋಟೋಗಳನ್ನು ಸಹಾ ತೆಗೆದಿರುತ್ತಾರೆ. ಸಾಕ್ಷಿ ನಿಪಿ 3 ರಿಂದ 5 ರ ಪೋಟೋ ನೋಡಿ ಗುರುತಿಸುತ್ತಾರೆ. ಸದ್ರಿ ದಿನ ಪೋಲಿಸರು ವಶಕ್ಕೆ ಪಡೆದ ನೈಟಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಎಂ ಒ 1 ನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಶ್ರೀ ವಿ. ಆರ್. ಎನ್. ವಕೀಲರಿಂದಃ**

ಚಾಸಾ 1 ರವರ ಅಂಗಡಿಯ ಪಕ್ಕದಲ್ಲಿ ನಮ್ಮ ಸ್ಟಾಂಡ್ ಇದ್ದು ಹಾಗಾಗಿ ನನಗೆ ಅವರ ಪರಿಚಯ ಇದೆ. ಸದ್ರಿ ದಿನ ಚಾಸ 1 ರವರು ದಾಖಲೆಗೆ ಸಹಿ ಮಾಡಲು ನನ್ನನ್ನು ಕರೆದಿದ್ದರು. ಪಂಚನಾಮೆ ಬರೆಯಲು ಪೋಲಿಸರಿಗೆ ನಾನು ಮಾಹಿತಿ ಕೊಟ್ಟಿರುವುದಿಲ್ಲ. ಅದರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ. ನಾನು ಪೋಲಿಸರು ಸ್ಥಳಕ್ಕೆ ಬಂದಾಗ ಸುಮಾರು 5-10 ನಿಮಿಷ ಮಾತ್ರ ಸ್ಥಳದಲ್ಲಿ ಇದ್ದೆ. ನೈಟಿಯನ್ನು ಎಲ್ಲಿಂದ ತಂದು ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಯಾರು ಅದನ್ನು ತಂದು ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನಗೆ ನೈಟಿಯನ್ನು ಬಿಚ್ಚಿ ತೋರಿಸಿದ್ದು ಇರುವುದಿಲ್ಲ. ನಾನು ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.
Sd/-
ಪ್ರ ದ ನ್ಯಾದಂ ಹೊನ್ನಾವರ.